"ಇಲ್ಲ, ನನ್ನಿಂದ ಎದ್ದೇಳಲು ಸಾಧ್ಯವಿಲ್ಲ ಎಂದು ನಿರ್ಧಾರ ಮಾಡಿಬಿಟ್ಟೆ. ಇನ್ನು ನನ್ನಿಂದ ನಡೆಯಲು ಸಾಧ್ಯವಿಲ್ಲ. ಮಾತನಾಡಲು ಸಾಧ್ಯವಿಲ್ಲ. ಮನು ತನ್ನ ಕೈಯಲ್ಲಿಟ್ಟುಕೊಂಡಿರುವ ಕನ್ನಡಕದ ಗೂಡಿಗೂ, ಡೈರಿಗೂ ಇನ್ನು ಕೆಲಸ ಇರುವುದಿಲ್ಲ. ನನ್ನ ಬಿಳಿಯ ಶಾಲು ಈಗ ಕೆಂಪಾಗಿದೆ. ಹುಲ್ಲುಹಾಸಿನ ಮೇಲೆ ಚಾಪೆಯನ್ನು ಹಾಸಿಕೊಂಡು ಸೂರ್ಯನ ಬೆಳಕಿನಲ್ಲಿ ಮೈ ಕಾಯಿಸಿಕೊಳ್ಳುವ ಅಗತ್ಯ ಇರುವುದಿಲ್ಲ. ಫೆಬ್ರುವರಿ ತಿಂಗಳು ವಾರ್ಧಾಗೆ ಹೋಗುವ ವ್ಯವಸ್ಥೆ ಮಾಡಲು ಹೇಳಿದ್ದೆ. ಇನ್ನು ಅದಕ್ಕೆ ಅವಕಾಶವಿಲ್ಲ. ಆಹಾರ ಸೇವಿಸಬೇಕಿಲ್ಲ. ಮುಗುಳ್ನಗುಗಳು ಬೇಕಿಲ್ಲ. ಚಿಂತೆಯೋ ನೆನಪೋ ಯಾವುದೂ ಬೇಡ. ಕೊನೆಯದಾಗಿ, ನನ್ನ ಕಿವಿಯಲ್ಲಿ ಧ್ವನಿಸುವ ನಿನ್ನ ದನಿ ನಿಂತು ಹೋದರೆ, ನನ್ನ ಉಸಿರು ಮೇಲೆದ್ದು ಮೋಡದೊಂದಿಗೆ ಕಲೆತು ಬಿಡುತ್ತದೆ, ಕಸ್ತೂರ್."

ಚಳಿಗಾಲದ ಸೂರ್ಯ ದಣಿದು ಪಶ್ಚಿಮದಲ್ಲಿ ಇಳಿದಾಗ ಮೆಲ್ಲಗೆ ಎದ್ದ ಗಾಳಿ ದೇಹವನ್ನು ಪುಳಕಗೊಳಿಸಿತು. ಅದು ಕಸ್ತೂರ್‌ನ ಉಡುಪನ್ನು ಪಟಪಟಿಸಿದಾಗ ಮೋಹನ್, ''ಕಸ್ತೂರ್... ನಿನ್ನ ಸೆರಗನ್ನು ಸರಿಮಾಡಿಕೋ, ಜಾರುತ್ತಿದೆ ನೋಡು'' ಎಂದರು.

ಕಸ್ತೂರ್ ಗಲಗಲ ಎಂದು ನಗುತ್ತಾ, ''ನೀವು ಮಹಾತ್ಮನಾಗಿದ್ದರೂ ಗಂಡಸು ಎಂದು ಅರ್ಥಮಾಡಿಸಿದಿರಿ'' ಎಂದಳು. ''ಬದುಕಿನಲ್ಲಿ ಅಸಾಮಾನ್ಯ ವಿಚಾರಗಳನ್ನು ತುಂಬಿಕೊಂಡ ನೀವು ಸಾಮಾನ್ಯ ಬದುಕು ಹೇಗಿರುತ್ತದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಅದು ಮುಂದಿನ ಜನ್ಮದಲ್ಲಾದರೂ ನಿಮಗೆ ದಕ್ಕಲಿ."

"ಸರಿ, ಅದಿರಲಿ. ನೀನು ಆಗಲೂ ನನ್ನ ಜತೆ ಇರಲು ಬಯಸುತ್ತೀಯಾ?"

"ಹಾ... ಬಯಸುತ್ತೇನೆ" ಕಸ್ತೂರಿ ಹೇಳಿದಳು.

ಪ್ರಶ್ನೆಗೂ ಉತ್ತರಕ್ಕೂ ನಡುವೆ ಒಂದು ಗಳಿಗೆ ವಿರಾಮ ಇತ್ತೆಂದು ಇಬ್ಬರಿಗೂ ಅನಿಸಿತು.

## ಕಲೈಸೆಲ್ವಿ

ತಮಿಳುನಾಡಿನ ನೆಯ್ವೇಲಿಯವರು. ಪ್ರಸ್ತುತ ತಿರುಚ್ಚಿಯಲ್ಲಿ ವಾಸ. ವಾಣಿಜ್ಯಶಾಸ್ತ್ರದ ಪದವೀಧರೆ. ಐದು ಸಣ್ಣಕತೆಗಳ ಸಂಕಲನಗಳು, ಮೂರು ಕಾದಂಬರಿಗಳು ಪ್ರಕಟವಾಗಿವೆ. 120ಕ್ಕೂ ಹೆಚ್ಚು ಸಣ್ಣಕತೆಗಳು, 20ಕ್ಕೂ ಹೆಚ್ಚು ಅಂಕಣಗಳು, ಆರಕ್ಕೂ ಹೆಚ್ಚು ಕಾದಂಬರಿಗಳು ತಮಿಳು ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಪ್ರಸ್ತುತ ಗಾಂಧಿಯ ಬಗ್ಗೆ ಸಣ್ಣಕತೆಗಳನ್ನು, ಕಾದಂಬರಿಯನ್ನು ಬರೆಯುತ್ತಿದ್ದಾರೆ.

## ಕೆ. ನಲ್ಲತಂಬಿ

ತಮಿಳಿನಿಂದ ಕನ್ನಡಕ್ಕೆ ಹಾಗೂ ಕನ್ನಡದಿಂದ ತಮಿಳಿಗೆ ಅನೇಕ ಕತೆ, ಕವನಗಳನ್ನು ಅನುವಾದಿಸುತ್ತ ಬಂದಿರುವ ನಲ್ಲತಂಬಿ ಮೈಸೂರಿನವರು. ಪ್ರಸ್ತುತ ಬೆಂಗಳೂರಿನಲ್ಲಿ ನೆಲಸಿದ್ದಾರೆ. ಪಿ. ಲಂಕೇಶ್‌ರ 'ನೀಲು' ಕವಿತೆಗಳನ್ನು 'ಮೊಟ್ಟುವಿರಿಯುಮ್ ಸತ್ತಮ್' ಎಂಬ ಹೆಸರಿನಲ್ಲಿ ತಮಿಳು ಭಾಷೆಗೆ ಅನುವಾದಿಸಿದ್ದಾರೆ. ಛಾಯಾಗ್ರಹಣದಲ್ಲಿ ಹೆಚ್ಚಿನ ಆಸಕ್ತಿ. ಪೆರುಮಾಳ್ ಮುರುಗನ್, ಸುಂದರ ರಾಮಸ್ವಾಮಿ ಅವರ ಕಾದಂಬರಿಗಳನ್ನು ಕನ್ನಡಕ್ಕೆ ತಂದಿದ್ದಾರೆ.